# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 716 |
| ಸದಸ್ಯರ ಹೆಸರು | : | ಶ್ರೀ ಚಿದಾನಂದ ಎಂ ಗೌಡ<br>(ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಅರಣ್ಯ, ಜೀವಿಪರಿಸ್ಥಿತಿ<br>ಮತ್ತು ಪರಿಸರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅರಣ್ಯ ಇಲಾಖೆಯ ಎಷ್ಟು ಭೂಮಿಯನ್ನು ಗುತ್ತಿಗೆಗೆ ನೀಡಲಾಗಿದೆ; ಇದರಲ್ಲಿ ಗುತ್ತಿಗೆ ಅವಧಿ ಮುಗಿದ ಭೂಮಿಯ ವಿಸ್ತೀರ್ಣವೆಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ರಬ್ಬರ್, ಕಾಫಿ, ಟೀ ಬೆಳೆಯಲು ಒಟ್ಟು= 6746.33<br>1. ಚಾಮರಾಜನಗರ ಜಿಲ್ಲೆ – 599.96 ಎಕರೆ ಅಂದಾಜು<br>2. ಕೊಡಗು ಜಿಲ್ಲೆ – 6146.37 ಎಕರೆ ಅಂದಾಜು ಗುತ್ತಿಗೆ ನೀಡಲಾಗಿದೆ.<br>ಸದರಿ ಗುತ್ತಿಗೆಯನ್ನು ಅಂದಿನ ಬ್ರಿಟಿಷ್ ಸರ್ಕಾರದ ಸೆಕ್ರಟರಿ ಆಫ್ ಸ್ಟೇಟ್ ಫಾರ್ ಇಂಡಿಯ ಕೌನ್ಸಿಲ್ ರವರು 1910 ರಿಂದ 1929ರ ಸಾಲಿನಲ್ಲಿ 999 ವರ್ಷಗಳ ಅವಧಿಗೆ ಗೇಣಿಗೆ ನೀಡಲಾಗಿದೆ.<br>ತದನಂತರ ಸರ್ಕಾರಿ ಆದೇಶ ಸಂಖ್ಯೆ.192.ಎಫ್ ಎಲ್.ಎಲ್.2008 ದಿನಾಂಕ 19.12.2012ರಲ್ಲಿ ಗುತ್ತಿಗೆ ಮೂಲ ಅವಧಿಯನ್ನು 999 ವರ್ಷಗಳಿಂದ 99 ವರ್ಷಗಳಿಗೆ ಮಿತಿಗೊಳಿಸಿ ಆದೇಶ ಮಾಡಲಾಗಿರುತ್ತದೆ.<br><br>ಸದರಿ ಗುತ್ತಿಗೆ ಅವಧಿಯು 2015ನೇ ಸಾಲಿಗೆ ಮುಕ್ತಾಯ ಗೊಂಡಿರುವುದರಿಂದ ಗುತ್ತಿಗೆ ನೀಡಿರುವ ಜಾಗವನ್ನು ಇಲಾಖಾ ವಶಕ್ಕೆ ಪಡೆಯಲು ಸಂಬಂಧಪಟ್ಟ ಕಂಪನಿಯವರಿಗೆ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ) ಬೆಂಗಳೂರು ಇವರ ಪತ್ರ ಸಂಖ್ಯೆ: ಎಪಿಸಿಸಿಎಫ್(ಜಾಗೃತ)/ಬ್ರಿಟಿಷ್ ಲೀಸ್/ ಸಿಆರ್-52/2015-16, ದಿನಾಂಕ: 21.08.2015ರಂತೆ ನೋಟೀಸ್ ಜಾರಿಗೊಳಿಸಲಾಗಿರುತ್ತದೆ. |

| | | |
|---|---|---|
| ಆ) | ಗುತ್ತಿಗೆಗೆ ಪಡೆದ ಕಂಪನಿಗಳು ಸರ್ಕಾರಕ್ಕೆ ಪಾವತಿಸಬೇಕಾಗಿದ್ದ ಗುತ್ತಿಗೆ ಮೊತ್ತ ಮತ್ತು ಬಡ್ಡಿಯ ಮೊತ್ತ ಎಷ್ಟು; ಸದರಿ ಬಾಕಿಯನ್ನು ವಸೂಲಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು; (ಕಂಪನಿವಾರು ಮತ್ತು ಜಿಲ್ಲಾವಾರು ವಿವರ ನೀಡುವುದು) | **ಮಡಿಕೇರಿ ಜಿಲ್ಲೆಯಲ್ಲಿ**<br>2015ರ ಅಂತ್ಯಕ್ಕೆ ಈ ಕೆಳಕಂಡ ಕಂಪನಿಗಳಿಂದ ರೂ.1466.79 ಕೋಟಿಗಳು ಸರ್ಕಾರಕ್ಕೆ ಪಾವತಿಸಲು ಬಾಕಿ ಇರುತ್ತದೆ ಎಂದು ಅಂದಾಜಿಸಲಾಗಿರುತ್ತದೆ.<br><br>1. ಮರ್ಕೇರಾ ರಬ್ಬರ್ ಕಂಪನಿ<br>2. ನೀಲಾಂಬರ್ ರಬ್ಬರ್ ಕಂಪನಿ<br>3. ಥಾಮ್ ಸನ್ ರಬ್ಬರ್ ಕಂಪನಿ<br>4. ಪೋರ್ಟ್ ಲ್ಯಾಂಡ್ ರಬ್ಬರ್ ಕಂಪನಿ<br>5. ಟಾಟಾ ಕಾಫಿ ಲಿ.,<br>6. ಗ್ಲೆನ್ ಲೋರೆನ್ ಪ್ಲಾಂಟೇಷನ್<br><br>ಬಾಕಿ ಗುತ್ತಿಗೆ ಮೊತ್ತ ಪಾವತಿಸಲು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ) ಬೆಂಗಳೂರು ಇವರ ಇವರ ಪತ್ರ ಸಂಖ್ಯೆ: ಎಪಿಸಿಸಿಎಫ್(ಜಾಗೃತ)/ಬ್ರಿಟಿಷ್ ಲೀಸ್/ ಸಿಆರ್-52/2015-16, ದಿನಾಂಕ : 21.08.2015 ರಂತೆ ನೋಟೀಸ್ ಜಾರಿಗೊಳಿಸಲಾಗಿರುತ್ತದೆ.<br><br>ಭೋಗ್ಯದ ಬಾಕಿ ಮೊತ್ತ, ಬಡ್ಡಿ ಹಾಗೂ ಭೋಗ್ಯದ ಅವಧಿಯ ಬಗ್ಗೆ ಸಂಬಂಧಪಟ್ಟ ಕಂಪನಿಯವರು ನ್ಯಾಯಾಲಯದಲ್ಲಿ ದಾವೆಗಳನ್ನು ಹೂಡಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ಈ ಪ್ರಕ್ರಿಯೆಗೆ ತಡೆಯಾಜ್ಞೆ ನೀಡಿರುತ್ತದೆ. |
| ಇ) | ಗುತ್ತಿಗೆ ಅವಧಿ ಮುಗಿದ ಭೂಮಿಯನ್ನು ಹಿಂಪಡೆಯಲು ಸರ್ಕಾರ ಕೈಗೊಂಡ ಕ್ರಮವೇನು; ಯಾವ ಕಾಲಮಿತಿಯಲ್ಲಿ ಸದರಿ ಭೂಮಿಯನ್ನು ಹಿಂಪಡೆಯಲಾಗುವುದು; | ಸದರಿ ಕಂಪನಿಗಳು ಇಲಾಖೆಯ ಕ್ರಮದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆಯನ್ನು ತಂದಿರುವ ಕಾರಣ **ಈ ಪ್ರಕರಣಗಳನ್ನು ತ್ವರಿತ ವಿಲೇವಾರಿಗೆ ಕೈಗೊಳ್ಳುವ ಸಲುವಾಗಿ ಸರ್ಕಾರದ ಹಂತದಲ್ಲಿ ಆದೇಶ ಸಂಖ್ಯೆ. ಎಫ್‌ಇಇ 47 ಎಫ್‌ಎಲ್‌ಎಲ್ 2024 ದಿನಾಂಕ: 23.01.2024 ರನ್ವಯ ಕಾರ್ಯಪಡೆಯನ್ನು ರಚಿಸಲಾಗಿರುತ್ತದೆ.**<br><br>ನ್ಯಾಯಾಲಯದಲ್ಲಿ ಪ್ರಕರಣಗಳು ಇತ್ಯರ್ಥವಾದ ನಂತರ ಸರ್ಕಾರಿ ಜಮೀನನ್ನು ಇಲಾಖೆಗೆ ಹಿಂಪಡೆಯಲು ಕ್ರಮ ವಹಿಸಲಾಗುತ್ತಿದೆ. |
| ಈ) | ಗುತ್ತಿಗೆಗೆ ಪಡೆದ ಕಂಪನಿಯೊಂದು ಅರಣ್ಯ ಭೂಮಿಯನ್ನು ಸಾಗುವಳಿ ಭೂಮಿಯೆಂದು ಅಡಮಾನವಿಟ್ಟು ಸಾಲ ಪಡೆದು, ಸದರಿ ಕಂಪನಿ ಸಾಲ ಮರು ಪಾವತಿ ಮಾಡದ ಕಾರಣ ಅರಣ್ಯ ಭೂಮಿಯನ್ನು ಹರಾಜು ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೊಡಗು ಜಿಲ್ಲೆಯಲ್ಲಿ ಥಾಮಸನ್ ಪ್ಲಾಂಟೇಷನ್ ಇಂಡಿಯಾ ಪ್ರೈವೇಟ್ ಲಿ., ರವರು ಭೂಮಿಯನ್ನು ಅಡವಿಟ್ಟು ಸಾಲ ಪಡೆದಿರುತ್ತಾರೆ.<br><br>ಅದರಲ್ಲಿ ಸಾಲವನ್ನು ಮರುಪಾವತಿಸದೆ ಹರಾಜು ಹಾಕಿರುವ ಅಥವಾ ಹರಾಜು ಬಾಕಿ ಇರುವ ಪ್ರಕರಣಗಳು ಯಾವುದು ಇರುವುದಿಲ್ಲ. |

| | | |
|---|---|---|
| ಉ) | ನಿಯಮ ಬಾಹಿರವಾಗಿ ಭೂಮಿಯನ್ನು ಅಡಮಾನ ಮಾಡಿದ ಕಂಪನಿ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು; ಭೂಮಿಯನ್ನು ವಶಕ್ಕೆ ಪಡೆಯಲಾಗಿದೆಯೇ; ಪಡೆಯದಿದ್ದಲ್ಲಿ, ವಶಕ್ಕೆ ಪಡೆಯಲು ಸರ್ಕಾರ ಕೈಗೊಂಡ ಕ್ರಮವೇನು? | ಪ್ರಸ್ತುತ ಪ್ರಕರಣವು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುತ್ತದೆ. ಸದರಿ ಪ್ರಕರಣಗಳನ್ನು ತ್ವರಿತ ವಿಲೇವಾರಿ ಸಲುವಾಗಿ ಸರ್ಕಾರದ ಹಂತದಲ್ಲಿ ಈಗಾಗಲೇ ಒಂದು ಕಾರ್ಯಪಡೆಯನ್ನು ರಚಿಸಲಾಗಿರುತ್ತದೆ. |

**ಸಂಖ್ಯೆ: ಎಫ್‌ಇಇ 202 ಎಫ್‌ಎಲ್‌ಎಲ್ 2024**

**(ಈಶ್ವರ ಬಿ ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ
ಸಚಿವರು